ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 38/2012

(ಚಾ.ಸಾ.13 ಪ್ರಾ.ಸಾ.4)
ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು
ದಿನಾಂಕಃ 15.07.2016

| | |
|---|---|
| ಸಾಕ್ಷಿದಾರರ ಹೆಸರು | ಃ ಗುರುಸ್ವಾಮಿ |
| ತಂದೆಯ ಹೆಸರು | ಃ ತಾಯಪ್ಪ |
| ವಯಸ್ಸು | ಃ 50 ವರ್ಷ |
| ಉದ್ಯೋಗ | ಃ ವ್ಯಾಪಾರ |
| ವಾಸ | ಃ ಜನತಾ ಕಾಲೋನಿ , ಬೊಮ್ಮಸಂದ್ರ |

ಮುಖ್ಯವಿಚಾರಣೆ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಮ್ಮ ಏರಿಯಾದಲ್ಲಿ ತಾಯಪ್ಪನ ಮಗ ಗುರುಸ್ವಾಮಿ ಎನ್ನುವವರು ಯಾರೂ ಇಲ್ಲ . ಮೇಲೆ ಹೇಳಿದ ವಿಳಾಸದಲ್ಲಿ ಗುರುಸ್ವಾಮಿ ಎನ್ನುವ ಹೆಸರಿನಲ್ಲಿ ಇರುವುದು ನಾನೊಬ್ಬನೇ . ನನಗೆ ಚಾ.ಸಾ. 2 ರವರು ಗೊತ್ತು , ಅವರು ನಮ್ಮ ಮನೆಯ ಮುಂದಿನ ಮನೆಯವರು . ಚಾ.ಸಾ. 2 ರವರು ಹಂದಿಜೋಗಿ ಜಾತಿಯವರು , ನನ್ನ ಜಾತಿಯೂ ಹಂದಿಜೋಗಿ ಜಾತಿ . ನನಗೆ ಚಾ.ಸಾ. 2 ರವರ ಹೆಂಡತಿ ಮತ್ತು ಮಕ್ಕಳು ಗೊತ್ತು . ಅವರ ಮಕ್ಕಳ ಹೆಸರು ಮಂಜುನಾಥ , ವಿಜಯಕಾಂತ್ ಮತ್ತು ಅಜೇಯ್. ಚಾ.ಸಾ. 1 ರವರ ಹೆಂಡತಿಯ ಹೆಸರು ಮಂಗಮ್ಮ . ಚಾ.ಸಾ. 2 ರವರು ಅವರ ಮನೆಯಿಂದ 100 ಅಡಿ ದೂರದಲ್ಲಿ ಒಂದು ಅಂಗಡಿಯನ್ನು ಬೊಮ್ಮಸಂದ್ರ ಮೈನ್ ರಸ್ತೆಯಲ್ಲಿ ಇಟ್ಟುಕೊಂಡು ಹಂದಿಮಾಂಸ ಮತ್ತು ಕೋಳಿ ಮಾಂಸ ಮಾರುತ್ತಾರೆ . ನಾನು ಆರೋಪಿಗಳನ್ನು ನೋಡಿದ್ದೇನೆ , ಅವರು ಮೃತ ಮಂಜುನಾಥನ ಸ್ನೇಹಿತರು . ಈ ಘಟನೆಯಾಗುವ ಒಂದು ವರ್ಷದ ಮುಂಚಿನಿಂದ ನಾನು ಆರೋಪಿಗಳನ್ನು ನೋಡಿದ್ದೇನೆ.

ದಿನಾಂಕಃ 28.02.2012 ರಂದು ನಾನು ವ್ಯಾಪಾರಕ್ಕೆಂದು ಮಡಿವಾಳ ಚೆಕ್‌ಪೋಸ್ಟ್‌ಗೆ ಹೋಗಿದ್ದೆನು . ಆ ದಿವಸ ರಾತ್ರಿ 9.30 ಗಂಟೆಗೆ ಚಾ.ಸಾ. 2 ರವರು ನನಗೆ ಫೋನ್ ಮಾಡಿ ಅಲ್ಲಿ ಗಲಾಟೆಯಾಗಿದೆ ಅವರ ಮನೆಯ ಹತ್ತಿರ ಬನ್ನಿ ಎಂದು ನನ್ನನ್ನು ಕರೆದರು . ನನ್ನ ಜೊತೆಯಲ್ಲಿ ಅಂಥೋನಿ ಎನ್ನುವ ಹುಡುಗನು ಇದ್ದು , ಅವನ ದ್ವಿಚಕ್ರ ವಾಹನವು ಇದ್ದುದ್ದರಿಂದ ಅವನನ್ನು ಕರೆದುಕೊಂಡು ನಾನು ಚಾ.ಸಾ. 2 ರವರ ಮನೆಯ ಹತ್ತಿರ ಹೋದೆನು . ಮನೆಯಲ್ಲಿ ಯಾರೂ ಇರಲಿಲ್ಲ . ಅಕ್ಕ-ಪಕ್ಕ ವಿಚಾರಿಸಿದಾಗ ಗಲಾಟೆಯಾದ ವಿಷಯವನ್ನು ತಿಳಿಸಿ ವೆಂಕಟೇಶ್ವರ ನರ್ಸಿಂಗ್ ಹೋಂಗೆ ಹೋಗಿರುವುದಾಗಿ ತಿಳಿಸಿದರು . ನಂತರ ನಾನು ಮತ್ತು ಅಂಥೋನಿ ವೆಂಕಟೇಶ್ವರ ನರ್ಸಿಂಗ್ ಹೋಂಗೆ ಹೋದೆವು . ನರ್ಸಿಂಗ್ ಹೋಂನಲ್ಲಿ ವೈದ್ಯರು ಚಾ.ಸಾ. 2 ರವರಿಗೆ ಚಿಕಿತ್ಸೆ ಕೊಡುತ್ತಿದ್ದರು , ಚಾ.ಸಾ. 2 ರವರ ಬೆನ್ನಿಗೆ ಏಟಾಗಿತ್ತು . ಅಲ್ಲಿ ಮಂಜುನಾಥ್ , ವಿಜಯಕಾಂತ್ ಮತ್ತು ಮಂಗಮ್ಮ ಇದ್ದರು . ನಾನು ಆಸ್ಪತ್ರೆಗೆ ಹೋದಾಗ ಸುಮಾರು ರಾತ್ರಿ 10.30 ಗಂಟೆಯಾಗಿರಬಹುದು . ನಾನು ಚಾ.ಸಾ. 2 ರವರ ಮಗ ವಿಜಯಕಾಂತನನ್ನು ಏನಾಯಿತು ಎಂದು ವಿಚಾರಿಸಲು ರೂಂನಿಂದ ಆಸ್ಪತ್ರೆಯ ಆವರಣಕ್ಕೆ ಬಾ ಎಂದು ಕರೆದೆನು . ನಾನು , ವಿಜಯಕಾಂತ್ ಮತ್ತು ಅಂಥೋನಿ ಮಾತನಾಡುತ್ತಾ ನಿಂತಿದ್ದೆವು . ಆಗ ಸುಮಾರು ರಾತ್ರಿ 11.30 ಗಂಟೆಯಾಗಿತ್ತು. ನಾವುಗಳು ಮಾತನಾಡುತ್ತಾ ನಿಂತಿದ್ದಾಗ ಒಂದು ಗ್ಯಾಂಗ್ ಬಂದಿತು . ಆ ಗ್ಯಾಂಗ್‌ನಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿಗಳು ಇದ್ದರು . ಆರೋಪಿಗಳೆಲ್ಲಾ ವಿಜಯಕಾಂತನನ್ನು ನೋಡಿ ಇವನು ಇಲ್ಲೆ ಇದ್ದಾನೆ ಇವನಿಗೆ ಹಾಕಿರೋ ಎಂದು ಒಂದು ಲಾಂಗ್‌ನಿಂದ ವಿಜಯಕಾಂತನಿಗೆ ತಲೆಗೆ ಹೊಡೆಯಲು ಬಂದರು ಆಗ ವಿಜಯಕಾಂತ ಎರಡು ಕೈಗಳನ್ನು ಅಡ್ಡ ಹಿಡಿದಾಗ ಅವನ ಎಡಹಸ್ತಕ್ಕೆ

ಚುಚ್ಚಿದ ಗಾಯವು ಆಯಿತು . ವಿಜಯಕಾಂತನಿಗೆ ಹೊಡೆದಿರುವುದು ಆರೋಪಿ ನಾಗರಾಜ . ವಿಜಯಕಾಂತ ಜೋರಾಗಿ ಕಾಪಾಡಿ ಎಂದು ಕಿರುಚಿದನು . ಕಿರುಚುವ ಶಬ್ದ ಕೇಳಿ ಅವನ ಅಣ್ಣ ಮಂಜುನಾಥ್ ಆಸ್ಪತ್ರೆಯಿಂದ ಹೊರಗೆ ಬಂದನು . ಮಂಜುನಾಥನನ್ನು ನೋಡಿ ಆರೋಪಿಗಳ ಗುಂಪು ವಿಜಯಕಾಂತನನ್ನು ಬಿಡಿ ಮಂಜುನಾಥನೇ ಮೇನ್ ಪಾರ್ಟಿ ಎಂದು ಅವನನ್ನು ಹಿಡಿಯಿರಿ ಎಂದು ಹೇಳಿದಾಗ ಮಂಜುನಾಥ ಓಡಿ ಹೋಗಲು ಶುರು ಮಾಡಿದನು . ಆಗ ಆರೋಪಿಗಳು ಅವನನ್ನು ಅಟ್ಟಿಸಿಕೊಂಡು ಹಿಂಬಾಲಿಸಿದರು . ಅವರುಗಳ ಹಿಂದೆ ನಾನು , ವಿಜಯಕಾಂತ್ , ಅಂಥೋನಿ , ಆಸ್ಪತ್ರೆಯಲ್ಲಿ ಕೆಲಸ ಮಾಡುವ ಶಂಕರ್ ಓಡಿದೆವು . ಮಂಜುನಾಥ ಓಡುತ್ತಾ ಆಸ್ಪತ್ರೆಯ ಹಿಂಭಾಗದ ಕಾಂಪೌಂಡ್‌ನ್ನು ಹತ್ತಲು ಪ್ರಯತ್ನಿಸುತ್ತಿದ್ದಾಗ ಆರೋಪಿ ನಾಗರಾಜ್ ಲಾಂಗ್‌ನಿಂದ ಹಿಂಬದಿಯಿಂದ ಬಲಗಾಲಿಗೆ ಹೊಡೆದನು , ಆಗ ಮಂಜುನಾಥ ಕೆಳಗೆ ಬಿದ್ದು ಹೋದನು , ಆರೋಪಿ ರಂಜಿತ್ ಚಾಕುವಿನಿಂದ ಮಂಜುನಾಥನ ಬೆನ್ನಿಗೆ ಚುಚ್ಚಿದನು . ಅಲ್ಲಿದ್ದ ಗ್ಯಾಂಗ್‌ನವರು ಮಂಜುನಾಥನಿಗೆ ಇನ್ನು ಪ್ರಾಣವಿದೆ ಅವನನ್ನು ತೆಗೆದು ಬಿಡಿ ಎಂದು ಹೇಳಿದರು . ಸಾಕ್ಷಿಯು ಮೊದಲು ಆರೋಪಿ ನಾಗರಾಜನ ಕೈಯಿಂದ ಆರೋಪಿ ಸಂದೀಪ್ ಚಾಕುವನ್ನು ಕಿತ್ತುಕೊಂಡನು ಎಂದು ಹೇಳಿದ್ದು ತಕ್ಷಣ ಸಾಕ್ಷಿಯು ಆರೋಪಿ ರಂಜಿತ್ ಕೈಯಿಂದ ಆರೋಪಿ ಸಂದೀಪ್ ಚಾಕುವನ್ನು ಕಿತ್ತುಕೊಂಡು ಮಂಜುನಾಥನ ಎದೆಗೆ ಮೂರು ಬಾರಿ ಚುಚ್ಚಿದನು ಎಂದು ಹೇಳಿದ್ದಾರೆ . ಮಂಜುನಾಥ ರಕ್ತ ಗಾಯಗೊಂಡು ಕೆಳಗೆ ಬಿದ್ದು ಹೋದನು . ಅವನ ದೇಹದಿಂದ ರಕ್ತ ಸುರಿಯುತ್ತಿತ್ತು . ಆರೋಪಿಗಳು ಇವನ ಕಥೆ ಮುಗಿಯಿತು ಎಂದು ಅಲ್ಲಿಂದ ಹೊರಟು ಹೋದರು . ನಾನು , ಅಂಥೋನಿ , ಶಂಕರ್ ಮತ್ತು ವಿಜಯಕಾಂತ್ ಮಂಜುನಾಥನನ್ನು ನಾವು ನಾಲ್ಕು ಜನ ಎತ್ತಿಕೊಂಡು ಅದೇ ಆಸ್ಪತ್ರೆಗೆ ತೆಗೆದುಕೊಂಡು ಹೋದೆವು . ಅಲ್ಲಿ ವೈದ್ಯರು ನೋಡಿ ಇಲ್ಲಿ

ಆಗುವುದಿಲ್ಲ , ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು . ನಾವುಗಳು ಮಂಜುನಾಥನನ್ನು ಸ್ಪರ್ಶ ಆಸ್ಪತ್ರೆಗೆ ಕರೆದುಕೊಂಡು ಹೋದೆವು . ವೈದ್ಯರು ಬಂದು ನೋಡಿ ಮಂಜುನಾಥನ ಪ್ರಾಣ ಹೋಗಿದೆ ಎಂದು ಹೇಳಿದರು . ಆ ದಿವಸ ಹೊಡೆಯಲು ಉಪಯೋಗಿಸಿದ ಲಾಂಗ್ ಮತ್ತು ಚಾಕುವನ್ನು ನೋಡಿದರೆ ಗುರ್ತಿಸುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಮು.ಮಾ. 6 ಮತ್ತು 7ನ್ನು ಅದೇ ಲಾಂಗ್ ಮತ್ತು ಚಾಕು ಎಂದು ಗುರ್ತಿಸಿದ್ದಾರೆ . ಇಷ್ಟೆಲ್ಲಾ ಘಟನೆಯು ಆಗುವಾಗ ಸುಮಾರು ರಾತ್ರಿ 11.30 ಗಂಟೆಯಾಗಿತ್ತು . ಈ ಘಟನೆಯು ನಡೆಯುವ ಸಮಯದಲ್ಲಿ ಲೈಟ್‌ನ ಬೆಳಕು ಇತ್ತು , ಅದರಿಂದ ಘಟನೆ ಚೆನ್ನಾಗಿ ಕಾಣುತ್ತಾ ಇತ್ತು . ಘಟನೆಯಾದ ಮಾರನೆ ದಿವಸ ನಾನು ಡಿವೈಎಸ್‌ಪಿ ರವರಿಗೆ ಈ ಎಲ್ಲಾ ವಿಷಯಗಳನ್ನು ಹೇಳಿ ಹೇಳಿಕೆಯನ್ನು ಕೊಟ್ಟಿದ್ದೇನೆ .

ಪೊಲೀಸರು ಆರೋಪಿಗಳನ್ನು ಅರೆಸ್ಟ್ ಮಾಡಿದ್ದು , ಅವರುಗಳನ್ನು ಬಂದು ನೋಡಬೇಕೆಂದು ನನಗೆ ತಿಳಿಸಿದ ಮೇಲೆ ನಾನು ಠಾಣೆಗೆ ಹೋಗಿ ಆರೋಪಿಗಳನ್ನು ಗುರ್ತಿಸಿದ್ದೇನೆ .

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಸಾಕ್ಷಿಯ ಪಾಟೀ ಸವಾಲನ್ನು ಉಳಿದ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಮಾಡುವುದಾಗಿ ಅರ್ಜಿಗಳನ್ನು ಸಲ್ಲಿಸಿದ್ದು , ಅರ್ಜಿಗಳನ್ನು ಪುರಸ್ಕರಿಸಿ ಪಾಟೀ ಸವಾಲನ್ನು ಮುಂದೂಡಲಾಯ್ತು .

**(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಬಿ.ವಿ. ರೇಣುಕ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು.